ಮಾಡಿಕೊಡುತ್ತಿದ್ದರು. ನಮ್ಮ ಮನೆಗೂ ಬರುತ್ತಿದ್ದ ಅವರು ಮಾಡುತ್ತಿದ್ದ ಚಟ್ನಿಪುಡಿ ಬಹಳ ರುಚಿಯಾಗಿರುತ್ತಿತ್ತು. ನಾವೆಲ್ಲಾ ಅವರನ್ನು 'ಚಟ್ನಿಪುಡಿ ಸೀತಮ್ಮ' ಎಂದೇ ಕರೆಯುತ್ತಿದ್ದೆವು. ಅಮ್ಮ ಕರೆದಾಗಲೆಲ್ಲಾ ಅವರು ಮಧ್ಯಾಹ್ನ ಸುಮಾರು ಮೂರು ಗಂಟೆಗೆ ಬಂದು ರಾತ್ರಿ ಸುಮಾರು ಏಳು ಗಂಟೆವರೆಗೆ ಇದ್ದು ಮನೆಗೆ ಬೇಕಾದ ಪುಡಿಗಳನ್ನೆಲ್ಲಾ ಮಾಡಿಕೊಡುತ್ತಿದ್ದರು. ಸೌದೆ ಒಲೆಯ ಮೇಲೋ, ಇದ್ದಿಲಿನ ಒಲೆಯ ಮೇಲೋ ಅಥವಾ ಸೀಮೆಎಣ್ಣೆ ಸ್ಟೌ ಮೇಲೋ ಇರಿಸಿದ ಬಾಣಲೆಯಲ್ಲಿ ಬೇಕಾದ ಪದಾರ್ಥಗಳನ್ನೆಲ್ಲಾ ಹಾಕಿ ಹದವಾಗಿ ಹುರಿದು ಬೇರೆ ಬೇರೆ ಪುಡಿಗಳಿಗೆ ಸಿದ್ಧಮಾಡಿಕೊಳ್ಳುತ್ತಿದ್ದರು. ಅನಂತರವೇ ಇರುತ್ತಿದ್ದುದು, ಹುರಿದ ಪದಾರ್ಥಗಳನ್ನು ಒರಳುಕಲ್ಲಿಗೆ ಹಾಕಿ ಒನಕೆಯಿಂದ ಕುಟ್ಟುವ ಅವರ ಕಷ್ಟದ ಕೆಲಸ. ಮೆಣಸಿನ ಖಾರದ ಘಾಟು ಮೂಗಿಗೆ ಬಡಿಯುತ್ತದೆಂದು ಅವರು ಮಕ್ಕಳನ್ನು ಒಳಗೆ ಬಿಡದೆ ಅಡುಗೆಮನೆ ಬಾಗಿಲು ಹಾಕಿಕೊಂಡು ಕುಟ್ಟುವ ಕೆಲಸ ಪ್ರಾರಂಭಿಸುತ್ತಿದ್ದರು. ಅಮ್ಮನೋ ದೊಡ್ಡಮ್ಮನೋ ಅವರಿಗೆ ಸಹಾಯ ಮಾಡುತ್ತಿದ್ದರು. ಕುಟ್ಟುವಾಗ ಅವರು 'ಉಸ್‌ಬುಸ್' ಎಂದು ಉಸಿರು ಬಿಡುವುದು ಮಾತ್ರ ನಮಗೆ ಕೇಳಿಸುತ್ತಿತ್ತು. ಒಳಗೇನು ಮಾಡುತ್ತಿದ್ದಾರೆಂದು ಕುತೂಹಲಕ್ಕೆ ಒಮ್ಮೊಮ್ಮೆ ಬಾಗಿಲ ಸಂದಿಯಿಂದ ನಾವು ಇಣುಕುತ್ತಿದ್ದೆವು. ಅವರು ತಮ್ಮ ಸೀರೆಯ ಸೆರಗಿನ ತುದಿಯನ್ನೇ ಮುಖಗವಸಾಗಿ ಕಟ್ಟಿಕೊಂಡರೂ ಮೆಣಸಿನ ಘಾಟಿಗೆ ಬರುತ್ತಿದ್ದ ಸಿಂಬಳವನ್ನು ಕರವಸ್ತ್ರವೊಂದರಿಂದ ಒರೆಸಿಕೊಳ್ಳುತ್ತಾ, ಒನಕೆಯನ್ನು ಎಡಗೈಯಿಂದ ಬಲಗೈಗೆ ಬದಲಾಯಿಸುತ್ತಾ ಕುಟ್ಟುವ ಕೆಲಸ ಮಾಡುವುದನ್ನು ನೋಡುತ್ತಿದ್ದೆವು. ಅಷ್ಟರಲ್ಲಿ 'ಏ, ಇಲ್ಲೇನು ಕೆಲ್ಸ ನಿಮ್ಗೆ? ಘಾಟು ಮೂಗಿಗೆ ಬಡಿಯುತ್ತೆ, ಹೊರಗೆ ಹೋಗಿ ಆಡಿಕೊಳ್ರೋ' ಎಂದು ದೊಡ್ಡಮ್ಮ (ಅಮ್ಮನ ಅಮ್ಮ) ಕಳಿಸಿಬಿಡುತ್ತಿದ್ದರು. ಅಂತೂ ಹೊತ್ತು ಮುಳುಗಿದ ಒಂದು ಗಂಟೆಯ ಅನಂತರ ಅವರ ಕುಟ್ಟುವ ಕೆಲಸ ಮುಗಿಯುತ್ತಿತ್ತು. ಚಟ್ನಿಪುಡಿ, ಸಾರಿನಪುಡಿ, ಹುಳಿಪುಡಿ ಮಾಡಿ ಬೇರೆ ಬೇರೆ ಡಬ್ಬಿಗಳಲ್ಲಿ ಅದನ್ನು ತುಂಬಿಸಿಡುತ್ತಿದ್ದರು. ಅವರು ಮಾಡುತ್ತಿದ್ದ ಕುಟ್ಟವಲಕ್ಕಿ ಎಂದರೆ ನನಗೆ ಪಂಚಪ್ರಾಣ. ಹಾಗಾಗಿ, ಅವರು ಒರಳಿನಲ್ಲಿ ಪುಡಿಗಳನ್ನು ಮಾಡುವಾಗ ಕುಟ್ಟವಲಕ್ಕಿಯನ್ನೂ ಮಾಡಿ ನನಗೋಸ್ಕರ ಒಂದು ಹಿತ್ತಾಳೆ ಡಬ್ಬಿಯಲ್ಲಿ ಪ್ರತ್ಯೇಕವಾಗಿ ತೆಗೆದಿಡುತ್ತಿದ್ದರು. ಅವರು ಮಾಡಿಕೊಡುತ್ತಿದ್ದ ಚಟ್ನಿಪುಡಿ, ಕುಟ್ಟವಲಕ್ಕಿಯ ರುಚಿ ಈಗಲೂ ನಾಲಗೆಯ ಮೇಲಿರುವಂತೆ ಭಾಸವಾಗುತ್ತದೆ.

ಪ್ರಾಚೀನ ಜನರು ಆಹಾರವನ್ನು ತಯಾರಿಸಿಕೊಳ್ಳಬೇಕಾದಾಗ ಬಹುಶಃ ಈ ಒರಳುಕಲ್ಲಿನ ಇನ್ನೊಂದು ರೂಪವಾದ ಅರೆಯುವ ಕಲ್ಲು ಅಸ್ತಿತ್ವಕ್ಕೆ ಬಂದಿರಬಹುದು. ಅರೆಯುವ ಕಲ್ಲಿನಲ್ಲಿ ಮೇಲ್ಭಾಗವು ಅಗಲವಾಗಿ ಸಮತಟ್ಟಾಗಿದ್ದು, ಪದಾರ್ಥಗಳನ್ನು ನುರಿಯಲು ಒಂದು ಮಧ್ಯಮ ಗಾತ್ರದ ಗುಂಡಾದ ಕಲ್ಲು ಇರುತ್ತದೆ. ಇದನ್ನು ಕೆಲವೆಡೆ ಅಣಾಣಕಲ್ಲು ಎನ್ನುತ್ತಾರೆ. ನಮ್ಮ ಹಿರಿಯರು ಐದಾರು ದಿನಗಳ ಮಟ್ಟಿಗೆ ಧರ್ಮಸ್ಥಳ ಮುಂತಾದ ಕಡೆ ಯಾತ್ರೆಗೆ ಹೋಗುವಾಗ ಅಡುಗೆ ಪದಾರ್ಥಗಳ ಜೊತೆಯಲ್ಲಿ ಗುಂಡುಕಲ್ಲ(ಉಂಡುಗಲ್ಲು)ನ್ನೂ ತೆಗೆದುಕೊಂಡು ಹೋಗುತ್ತಿದ್ದರಂತೆ. ದಾರಿಯ ಬದಿಯಲ್ಲಿ ಹಳ್ಳವೋ ತೊರೆಯೋ ಇದ್ದರೆ ಅಲ್ಲಿರುವ ಬಂಡೆ ಅಥವಾ ಕಲ್ಲಿನ ಮೇಲೆ ಪದಾರ್ಥಗಳನ್ನು ಗುಂಡುಕಲ್ಲಿಂದ ಅರೆದು ಅಡುಗೆ ಮಾಡಿ, ಊಟ ಮಾಡಿ, ಮುಂದಿನ ಪ್ರಯಾಣ ಕೈಗೊಳ್ಳುತ್ತಿದ್ದರಂತೆ. ಎರಡು ವಾರಗಳೋ, ತಿಂಗಳುಗಟ್ಟಲೆ ಪ್ರಯಾಣವೋ ಆದರೆ ಗುಂಡುಕಲ್ಲಿನ ಜೊತೆಗೆ ಕೆಳಭಾಗದ ಚಿಕ್ಕದಾದ, ಹೊತ್ತೊಯ್ಯಬಹುದಾದ ಅರೆಯುವ ಕಲ್ಲನ್ನೂ ತೆಗೆದುಕೊಂಡು ಹೋಗುತ್ತಿದ್ದರಂತೆ. ಆಗೆಲ್ಲ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುವುದೇ ಜಾಸ್ತಿ. ಹಾಗಾಗಿ, ಅಲ್ಲಲ್ಲಿ ಕೆಲವು ಗಂಟೆಗಳ ಕಾಲ ಪ್ರಯಾಣವನ್ನು ನಿಲ್ಲಿಸಿ, ಎಲ್ಲರೂ ಊಟ–ನೀರು ಪೂರೈಸಿ, ಜೊತೆಗೆ ಎತ್ತುಗಳಿಗೂ ಹುಲ್ಲು–ನೀರು ಒದಗಿಸಿ ವಿಶ್ರಾಂತಿ ಪಡೆದು ಪ್ರಯಾಣ ಮುಂದುವರೆಸುತ್ತಿದ್ದರು. ಧರ್ಮಸ್ಥಳಕ್ಕೆ ಹೋಗುವಾಗ ಉಜಿರೆಯ ಬಳಿ 'ನೀರುಚಿಲುಮೆ' ಎಂಬ ಸ್ಥಳವಿದೆ. ಇಲ್ಲಿ ಪ್ರಯಾಣಿಕರು